# 2021-22 ನೇ ಸಾಲಿನ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳು:-

**I. ಯೋಜನೆಯ ಹೆಸರು ಹಾಗೂ ಲೆಕ್ಕಶೀರ್ಷಿಕೆ: ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ [ಲೆ.ಶಿ: 2401-00-119-05-02]**

**II. ಯೋಜನೆಯ ಸಂಕ್ಷಿಪ್ತ ಪರಿಚಯ:**

ತೋಟಗಾರಿಕೆ ಅಭಿವೃದ್ಧಿಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳನ್ನು 23.24ಲಕ್ಷ ಹೆಕ್ಟೇರ್ ವಿಸ್ತೀರ್ಣದ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಅದರಲ್ಲಿ ತೋಟದ ಬೆಳೆಗಳನ್ನು ಶೇ.48.56 ಪ್ರದೇಶದಲ್ಲಿ ತರಕಾರಿ ಬೆಳೆಗಳನ್ನು ಶೇ. 20.66 ಪ್ರದೇಶದಲ್ಲಿ ಹಣ್ಣುಗಳನ್ನು ಶೇ. 16.69 ಪ್ರದೇಶದಲ್ಲಿ, ಇತರೆ ಬೆಳೆಗಳನ್ನು ಶೇ.14.10 ಪ್ರದೇಶದಲ್ಲಿ ಬೆಳೆಸಲಾಗುತ್ತಿದೆ. ತೋಟಗಾರಿಕೆ ಬೆಳೆಗಳ ಬೇಸಾಯದಲ್ಲಿ ಆಧುನೀಕರಣವಾದಂತೆ, ಹೊಸ ಕೀಟ ಮತ್ತು ರೋಗಗಳ ಬಾಧೆಯು ರಾಜ್ಯದಲ್ಲಿ ಕಂಡು ಬರುತ್ತಿದ್ದು, ತೋಟಗಾರಿಕೆ ಉತ್ಪನ್ನದ ಮೇಲೆ ಪರಿಣಾಮವನ್ನು ಬೀರಿ ಇಳುವರಿಯು ಕುಂಠಿತವಾಗುತ್ತಿದೆ. ಈ ನಿಟ್ಟಿನಲ್ಲಿ ತೋಟಗಾರಿಕೆ ಬೆಳೆಗಳನ್ನು ಕೀಟ ಮತ್ತು ರೋಗಗಳಿಂದ ರಕ್ಷಿಸಿ, ಅಧಿಕ ಇಳುವರಿ ಪಡೆದು ನಿಯಂತ್ರಿಸಲು ತೋಟಗಾರಿಕೆ ಇಲಾಖಾವತಿಯಿಂದ ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

**III. ಯೋಜನೆಯ ಉದ್ದೇಶಗಳು:**

1. ಇಲಾಖೆಯ ಪರೋಪಜೀವಿ ಉತ್ಪಾದನಾ ಪ್ರಯೋಗ ಶಾಲೆಗಳಲ್ಲಿ ತೆಂಗಿನ ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕಾಗಿ ಪರೋಪಜೀವಿಗಳ ಉತ್ಪಾದನೆ ಮಾಡಿ ಈ ಕೀಟ ಭಾಧಿತ ತೋಟಗಳ ರೈತರಿಗೆ ಉಚಿತವಾಗಿ ವಿತರಣೆ ಮಾಡುವುದು.
2. ರೋಗ ಮತ್ತು ಕೀಟ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಂಡ ರೈತರಿಗೆ ಸಹಾಯಧನವನ್ನು ನೀಡುವುದು.

**IV. ಯೋಜನೆಯ ಮುಖ್ಯ ಘಟಕ ಕಾರ್ಯಕ್ರಮಗಳು:**

1. ಪರೋಪಜೀವಿಗಳ (ಗೋನಿಯೋಜಸ್/ಬ್ರಾಕಿಮೇರಿಯ) ಉತ್ಪಾದನೆ.
2. ಐಸೇರಿಯಾ ಶಿಲೀಂಧ್ರದ ಉತ್ಪಾದನೆ.
3. ಸಸ್ಯ ಸಂರಕ್ಷಣೆ ಕ್ರಮಗಳನ್ನು ಕೈಗೊಂಡ ಎಲ್ಲಾ ವರ್ಗದ ರೈತರಿಗೆ ಸಹಾಯಧನ.
4. ಮೂಲಭೂತ ಸೌಕರ್ಯ.
5. ಸಿಬ್ಬಂದಿ ವೇತನ ಮತ್ತು ಇತರೆ ವೆಚ್ಚ.

## V. ಅನುದಾನ ಮತ್ತು ಸಹಾಯಧನ ವಿಧಾನ:

2021-22 ನೇ ಸಾಲಿನಲ್ಲಿ ನಿಗದಿಪಡಿಸಿದ ಅನುದಾನದ ವಿವಿಧ ಉಪ-ಶೀರ್ಷಿಕೆವಾರು ವಿವರ ಈ ಕೆಳಕಂಡಂತೆ ವಿವರಿಸಿದೆ.

| ಕ್ರ.ಸಂ | ಅನುದಾನ ವಿವರಗಳು | ಉಪ-ಶೀರ್ಷಿಕೆ | ಲಭ್ಯವಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ನಿರ್ವಹಣೆಯ ವೆಚ್ಚ | 200 | 399.00 |
| 2 | ವೇತನ | 003 | 7.00 |
| 3 | ಪ್ರವಾಸ ಭತ್ಯೆ | 041 | 1.00 |
| 4 | ತುಟ್ಟಿ ಭತ್ಯೆ | 011 | 2.00 |
| 5 | ಇತರೆ ಭತ್ಯೆ | 014 | 1.00 |
| 6 | ವೈದ್ಯಕೀಯ ವೆಚ್ಚ | 020 | 1.00 |
| 7 | ವೈದ್ಯಕೀಯ ವೆಚ್ಚದ ಮರುಪಾವತಿ | 021 | 3.00 |
| 8 | ವಿಶೇಷ ಘಟಕ ಯೋಜನೆ | 422 | 70.00 |
| 9 | ಗಿರಿಜನ ಉಪ ಯೋಜನೆ | 423 | 30.00 |
| | **ಒಟ್ಟು** | | **514.00** |

## VI. ತಾಂತ್ರಿಕ ವೈಶಿಷ್ಟತೆಗಳು ಹಾಗೂ ಅನುಷ್ಠಾನದ ವಿದಾನ:

### A. ತೆಂಗಿನ ಕಪ್ಪು ತಲೆ ಹುಳುವಿನ ನಿಯಂತ್ರಣೆಗಾಗಿ ಪರೋಪಜೀವಿಗಳ ಉತ್ಪಾದನೆ ಹಾಗೂ ವಿತರಣೆ

1. ಗೋನಿಯೋಜಸ್ ಪರೋಪಜೀವಿಗಳ ಉತ್ಪಾದನೆಗೆ KTPP ನಿಯಮಾವಳಿಯಂತೆ ದರಪಟ್ಟಿ/ಟೆಂಡರ್ ಕರೆದು ಕ್ರಮವಹಿಸುವುದು. ಪರೋಪಜೀವಿಗಳನ್ನು ರೂ.0.413ಗಳಿಗೆ (ರೂ.0.35 ಪರೋಪಜೀವಿ ಉತ್ಪಾದನೆ + ರೂ.0.063 ಜಿ.ಎಸ್.ಟಿ) ಮೀರದಂತೆ ಪ್ರತಿ ಪರೋಪಜೀವಿಯ ಉತ್ಪಾದನೆ ಕೈಗೊಳ್ಳಬೇಕು. ಇದರಲ್ಲಿ ಉತ್ಪಾದನಾ ವೆಚ್ಚ ರೂ.0.27 ಹಾಗೂ ಪರಿಕರಗಳಿಗಾಗಿ ರೂ.0.08 ನಿಗದಿಪಡಿಸಲಾಗಿರುತ್ತದೆ (GST ಅನ್ವಯ).
2. ಬ್ರಾಕಿಮೇರಿಯ ಪರೋಪಜೀವಿಗಳನ್ನು ರೂ.0.59ಗಳಿಗೆ (ರೂ.0.50 ಪರೋಪಜೀವಿ ಉತ್ಪಾದನೆ + ರೂ.0.09 ಜಿ.ಎಸ್.ಟಿ) ಮೀರದಂತೆ ಪ್ರತಿ ಪರೋಪಜೀವಿಯ ಉತ್ಪಾದನೆ ಕೈಗೊಳ್ಳಬೇಕು. ಇದರಲ್ಲಿ ಉತ್ಪಾದನಾ ವೆಚ್ಚ ರೂ.0.45 ಹಾಗೂ ಪರಿಕರಗಳಿಗಾಗಿ ರೂ.0.05 ನಿಗದಿಪಡಿಸಲಾಗಿರುತ್ತದೆ (GST ಅನ್ವಯ).
3. ಪರೋಪಜೀವಿಗಳ ಉತ್ಪಾದನೆಗೆ ಬೇಕಾದ ಪರಿಕರಗಳನ್ನು ಅಗತ್ಯಕ್ಕನುಗಣವಾಗಿ ಪ್ರತ್ಯೇಕವಾಗಿ ಅಧಿಕೃತ ಸಂಸ್ಥೆಗಳಿಂದ KTPP ನಿಯಮಾನುಸಾರ ಖರೀದಿಸುವುದು ಹಾಗೂ ಸಂಬಂಧಪಟ್ಟ ವಹಿಗಳಲ್ಲಿ ದಾಖಲಿಸಿ ನಿರ್ವಹಿಸುವುದು.

4. ಪ್ರಯೋಗಶಾಲೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ವರ್ಗದವರು ಸಹ ಪರೋಪಜೀವಿ ಉತ್ಪಾದನಾ ಕಾರ್ಯವನ್ನು ನಿರ್ವಹಿಸಬೇಕು.

5. ಪರೋಪಜೀವಿಗಳ ಉತ್ಪಾದನಾ, ಬಿಡುಗಡೆ ಇತ್ಯಾದಿ ವಿವರಗಳನ್ನು ಸಂಬಂಧಪಟ್ಟ ವಹಿಗಳಲ್ಲಿ ಎಲ್ಲಾ ಪ್ರಯೋಗಶಾಲೆಗಳಲ್ಲಿ ಏಕರೂಪತೆಯನ್ನು ಪಾಲಿಸಲು ಅನುಬಂಧ-1 ರಂತೆ ದಾಖಲಿಸಿ ನಿರ್ವಹಿಸುವುದು.

6. ಪರೋಪಜೀವಿಗಳನ್ನು ಕೀಟ ಬಾಧೆ ಕಾಣಿಸಿಕೊಳ್ಳುವ ಕಾಲಕ್ಕೆ ಅನುಗುಣವಾಗಿ ಪರಿಣಾಮಕಾರಿಯಾಗಿ ಉತ್ಪಾದನೆ ಕೈಗೊಳ್ಳಬೇಕು.

7. ಪರೋಪಜೀವಿ ಉತ್ಪಾದನಾ ಕೇಂದ್ರದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು.

8. ಎಲ್ಲಾ ಪ್ರಯೋಗಶಾಲೆಗಳು ಮಾರ್ಗಸೂಚಿಯಲ್ಲಿ ಸೂಚಿಸಿದಂತೆ ಕಾರ್ಯ ನಿರ್ವಹಿಸಬೇಕು, ಪರೋಪಜೀವಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಕೈಗೊಂಡು ಬೇಡಿಕೆ ಇರುವ ಜಿಲ್ಲೆಗಳಿಗೆ ಸರಬರಾಜು ಮಾಡುವುದು.

9. ಪರೋಪಜೀವಿಗಳ ಉತ್ಪಾದನೆಯನ್ನು ನಿರಂತರವಾಗಿ ವರ್ಷಪೂರ್ತಿ ಪ್ರಯೋಗಶಾಲೆಯು ಚಾಲ್ತಿಯಲ್ಲಿರುವಂತೆ ಕ್ರಮ ಕೈಗೊಳ್ಳುವುದು ಹಾಗೂ ಬೇಸಿಗೆ ಕಾಲದ ಪ್ರಾರಂಭದಲ್ಲಿ ಕೀಟ ಭಾದೆಯು ಅಧಿಕವಾಗುವ ಪ್ರಯುಕ್ತ ಈ ಸಮಯದಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದು. ಅದರಂತೆ ಈ ಬಗ್ಗೆ ಕಾರ್ಯಸೂಚಿಗಳನ್ನು ಸಿದ್ದಪಡಿಸಿ ಅನುಷ್ಠಾನಗೊಳಿಸುವುದು.

10. ಪರೋಪಜೀವಿಗಳ ಉತ್ಪಾದನೆಗೆ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳಿಗೆ ಅವಕಾಶ ಮಾಡಿಕೊಂಡು ಪರೋಪಜೀವಿಗಳ ಉತ್ಪಾದನೆ ಕೈಗೊಳ್ಳಬೇಕು.

11. ಪರೋಪಜೀವಿಗಳನ್ನು ಕಪ್ಪು ತಲೆ ಹುಳು ಬಾಧಿತ ತೆಂಗಿನ ತೋಟಗಳಿಗೆ ಬಿಡುಗಡೆಗೊಳಿಸುವುದು. ಸದರಿ ತೋಟಗಳ ಫಲಾನುಭವಿ ಹೆಸರು, ಗ್ರಾಮ, ಸರ್ವೇ ನಂ, ಮರಗಳ ಸಂಖ್ಯೆ, ಪಲಾನುಭವಿ ಸಹಿ ಇತ್ಯಾದಿ ಮಾಹಿತಿಯನ್ನು ವಿತರಣಾ ವಹಿಯಲ್ಲಿ ದಾಖಲಿಸತಕ್ಕದ್ದು. ಇದನ್ನು ಕಡ್ಡಾಯವಾಗಿ ನಿರ್ವಹಿಸುವುದು.

12. ತೋಟಗಳಲ್ಲಿ ಕೀಟ ನಿಯಂತ್ರಣೆಗಾಗಿ ತೆಗೆದುಕೊಳ್ಳಬೇಕಾದ ಇತರೆ ಹತೋಟಿ ಕ್ರಮಗಳನ್ನು ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕಾ ಅಧಿಕಾರಿಗಳು/ ಪ್ರಯೋಗಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ರೈತರಿಗೆ ತಿಳಿಸುವುದು.

13. ಪರೋಪಜೀವಿಯ ಸಮರ್ಪಕ ಉತ್ಪಾದನೆಗೆ ಸಂಬಂಧಿಸಿದಂತೆ ಪ್ರಯೋಗಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ತಾಲ್ಲೂಕಿನ ಹಿ.ಸ.ತೋ.ನಿ (ಜಿಪಂ/ರಾವ) ರವರು ನೇರ ಜವಾಬ್ದಾರರಾಗಿರುತ್ತಾರೆ.

14. ಈ ಕಾಂಪೊನೆಂಟ್‌ನ ವೆಚ್ಚವನ್ನು Object Code 200 ರಲ್ಲಿ ಭರಿಸುವುದು.

**B. ತೆಂಗಿನ ಬಿಳಿನೊಣದ ನಿಯಂತ್ರಣಕ್ಕಾಗಿ ಐಸೇರಿಯಾ ಶಿಲೀಂಧ್ರದ ಉತ್ಪಾದನೆ ಹಾಗೂ ವಿತರಣೆ:**

1. ಐಸೇರಿಯಾ ಶಿಲೀಂದ್ರದ ಉತ್ಪಾದನೆಗೆ KTPP ನಿಯಮಾವಳಿಯಂತೆ ದರಪಟ್ಟಿ/ಟೆಂಡರ್ ಕರೆದು ಕ್ರಮವಹಿಸುವುದು.
2. ಐಸೇರಿಯಾ ಶಿಲೀಂದ್ರದ ಉತ್ಪಾದನೆಗೆ ಬೇಕಾದ ಪರಿಕರಗಳನ್ನು ಅಗತ್ಯಕ್ಕನುಗಣವಾಗಿ ಪ್ರತ್ಯೇಕವಾಗಿ ಅಧಿಕೃತ ಸಂಸ್ಥೆಗಳಿಂದ KTPP ನಿಯಮಾನುಸಾರ ಖರೀದಿಸುವುದು ಹಾಗೂ ಸಂಬಂಧಪಟ್ಟ ವಹಿಗಳಲ್ಲಿ ದಾಖಲಿಸಿ ನಿರ್ವಹಿಸುವುದು.
3. ಪ್ರಯೋಗಶಾಲೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ವರ್ಗದವರು ಸಹ (ಸಂಬಂಧಿಸಿದ ಸತೋನಿ/ಸತೋಅ/ತೋಸ) ಐಸೇರಿಯಾ ಶಿಲೀಂದ್ರದ ಉತ್ಪಾದನಾ ಕಾರ್ಯವನ್ನು ನಿರ್ವಹಿಸಬೇಕು.
4. ಐಸೇರಿಯಾ ಶಿಲೀಂದ್ರದ ಉತ್ಪಾದನೆ ಮಾಡುವ ಪ್ರಯೋಗಶಾಲೆಗಳಲ್ಲಿ, ವಿತರಣೆ ಇತ್ಯಾದಿ ವಿವರಗಳನ್ನು ಸಂಬಂಧಪಟ್ಟ ವಹಿಗಳಲ್ಲಿ ದಾಖಲಿಸುವುದು.
5. ಐಸೇರಿಯಾ ಶಿಲೀಂದ್ರವನ್ನು ಬಿಳಿ ನೊಣ ಕೀಟ ಬಾಧೆ ಕಾಣಿಸಿಕೊಳ್ಳುವ ಕಾಲಕ್ಕೆ ಅನುಗುಣವಾಗಿ ಪರಿಣಾಮಕಾರಿಯಾಗಿ ಉತ್ಪಾದನೆ ಕೈಗೊಳ್ಳಬೇಕು.
6. ಐಸೇರಿಯಾ ಶಿಲೀಂದ್ರವನ್ನು ಬಿಳಿ ನೊಣ ಕೀಟ ಬಾಧಿತ ತೆಂಗಿನ ತೋಟಗಳಿಗೆ ಬಿಡುಗಡೆಗೊಳಿಸುವುದು. ಸದರಿ ತೋಟಗಳ ಫಲಾನುಭವಿ ಹೆಸರು, ಗ್ರಾಮ, ಸರ್ವೇ ನಂ, ಮರಗಳ ಸಂಖ್ಯೆ, ಪಲಾನುಭವಿ ಸಹಿ ಇತ್ಯಾದಿ ಮಾಹಿತಿಯನ್ನು ವಿತರಣಾ ವಹಿಯಲ್ಲಿ ದಾಖಲಿಸತಕ್ಕದ್ದು. ಇದನ್ನು ಕಡ್ಡಾಯವಾಗಿ ನಿರ್ವಹಿಸುವುದು.
7. ತೋಟಗಳಲ್ಲಿ ಕೀಟ ನಿಯಂತ್ರಣೆಗಾಗಿ ತೆಗೆದುಕೊಳ್ಳಬೇಕಾದ ಇತರೆ ಹತೋಟಿ ಕ್ರಮಗಳನ್ನು ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕಾ ಅಧಿಕಾರಿಗಳು/ ಪ್ರಯೋಗಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ರೈತರಿಗೆ ತಿಳಿಸುವುದು.
8. ಐಸೇರಿಯಾ ಶಿಲೀಂದ್ರದ ಸಮರ್ಪಕ ಉತ್ಪಾದನೆಗೆ ಸಂಬಂಧಿಸಿದಂತೆ ಪ್ರಯೋಗಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ತಾಲ್ಲೂಕಿನ ಹಿ.ಸ.ತೋ.ನಿ (ರಾ.ವ.) ರವರು ನೇರ ಜವಾಬ್ದಾರರಾಗಿರುತ್ತಾರೆ.
9. ಐಸೇರಿಯಾ ಶಿಲೀಂದ್ರದ ಉತ್ಪಾದನೆಗೆ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳಿಗೆ ಅವಕಾಶ ಮಾಡಿಕೊಂಡು ಐಸೇರಿಯಾ ಶಿಲೀಂದ್ರದ ಉತ್ಪಾದನೆ ಕೈಗೊಳ್ಳಬೇಕು.
10. ಈ ಕಾಂಪೊನೆಂಟ್‌ನ ವೆಚ್ಚವನ್ನು Object Code 200 ರಲ್ಲಿ ಭರಿಸುವುದು.

**C. ರೋಗ/ಕೀಟಗಳ ಸಮಗ್ರ ನಿಯಂತ್ರಣೆಗೆ ಅವಶ್ಯಕವಿರುವ ಸಸ್ಯ ಸಂರಕ್ಷಣೆ ಔಷಧಿಗಳಿಗೆ ಸಹಾಯಧನ:**

1. ಈ ಯೋಜನೆಯಡಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ಸಾಮಾನ್ಯ ಫಲಾನುಭವಿಗಳಿಗೆ (General) ಒಂದು ಘಟಕಕ್ಕೆ (1 ಹೆಕ್ಟೇರ್) ತಗಲುವ ಒಟ್ಟಾರೆ ವೆಚ್ಚ ರೂ.10,000/-ದ ಶೇ.75 ರಂತೆ, ಪ್ರತಿ ಹೆಕ್ಟೇರ್ ಗೆ ಗರಿಷ್ಟ ರೂ.7500/-ಗಳ ಸಹಾಯಧನವನ್ನು ನೀಡುವುದು. ಪರಿಶಿಷ್ಟ ಜಾತಿ

(SC) ಮತ್ತು ಪರಿಶಿಷ್ಟ ಪಂಗಡ (ST) ರೈತರಿಗೆ ಒಟ್ಟಾರೆ ವೆಚ್ಚದ ಶೇ.90 ರಂತೆ ಪ್ರತಿ ಹೆಕ್ಟೇರ್ ಗೆ ಗರಿಷ್ಟ ರೂ.9000/-ಗಳ ಸಹಾಯಧನವನ್ನು ನೀಡುವುದು. ಸಹಾಯಧನವನ್ನು ಗರಿಷ್ಟ 2 ಹೆಕ್ಟೇರ್ ವರೆಗೆ ಮಾತ್ರ ನೀಡುವುದು.

2. ವಿವಿಧ ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ ಮತ್ತು ರೋಗಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿದ ರೈತ ಫಲಾನುಭವಿಗಳಿಗೆ ತೋಟಗಾರಿಕೆ/ಕೃಷಿ ಇಲಾಖೆವತಿಯಿಂದ ಅನುಮೋದನೆಯಾಗಿರುವ Empanel list ನಲ್ಲಿರುವ L1 ದರವನ್ನು ಪರಿಗಣಿಸಿ ರೈತರಿಗೆ ನೇರವಾಗಿ DBT ಮೂಲಕ ಸಹಾಯಧನವನ್ನು ನೀಡುವುದು.

3. ಸದರಿ ಯೋಜನೆಯಡಿ ಕೃಷಿ ಇಲಾಖೆವತಿಯಿಂದ **ಅನುಮೋದಿತ Empanel listನ ಸರಬರಾಜುದಾರರು ಪರಿಕರಗಳನ್ನು ಸರಬರಾಜು ಮಾಡದೇ ಇದ್ದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಪರಿಕರಗಳನ್ನು ಖರೀದಿಸಿದ ರೈತ ಫಲಾನುಭವಿಗಳು GST ಸಂಖ್ಯೆ ಇರುವ ಬಿಲ್ಲುಗಳನ್ನು ನೀಡಿದ್ದಲ್ಲಿ, ಸಹಾಯಧನಕ್ಕಾಗಿ Empanel list ನ L1 Rateನ್ನು ಪರಿಗಣಿಸಬಹುದಾಗಿದೆ ಹಾಗೂ ತೋಟಗಾರಿಕೆ ಇಲಾಖೆಯಲ್ಲಿರುವ ಜೈವಿಕ ಕೇಂದ್ರಗಳಲ್ಲಿ Biopesticides ಗಳನ್ನು ಪರಿಗಣಿಸಬಹುದಾಗಿದೆ.**

4. ಕೃಷಿ ಇಲಾಖಾವತಿಯಿಂದ ಅನುಮೋದನೆಯಾಗಿರುವ L1 ದರ ಪಟ್ಟಿಯಲ್ಲಿರುವ ಪರಿಕರಗಳನ್ನು ಹೊರತುಪಡಿಸಿ, ಜಿಲ್ಲೆಯಲ್ಲಿ ಇನ್ನಿತರೆ ಪರಿಕರಗಳಿಗೆ ರೈತರು ಸಹಾಯಧನವನ್ನು ಅಪೇಕ್ಷಿಸಿದಲ್ಲಿ, ಅಂತಹ ಪರಿಕರಗಳಿಗೆ ತಮ್ಮ ಹಂತದಲ್ಲಿಯೇ ನಿಯಮಾನುಸಾರ ಕ್ರಮ ತೆಗೆದುಕೊಂಡು L1 ದರವನ್ನು ನಿಗದಿಪಡಿಸುವುದು.

5. ಸಸ್ಯ ಸಂರಕ್ಷಣಾ ಔಷಧಿಗಳನ್ನು ಕೃಷಿ ಇಲಾಖೆವತಿಯಿಂದ ಅನುಮೋದನೆಯಾಗಿರುವ Empanel list ನಲ್ಲಿರುವ ಕಂಪೆನಿಗಳಿಂದ ಇಲಾಖೆವತಿಯಿಂದ ರೈತರ ಬೇಡಿಕೆಗನುಗುಣವಾಗಿ ಖರೀದಿಸಿ ವಿತರಿಸುವುದು.

6. ಸದರಿ ಯೋಜನೆಯಡಿ ರೈತರು ಖರೀದಿಸಿದ ಸಸ್ಯ ಸಂರಕ್ಷಣಾ ಔಷಧಿಗಳ ಬಿಲ್ಲುಗಳಿಗೆ ಕಡ್ಡಾಯವಾಗಿ GST ಸಂಖ್ಯೆ ಇರಬೇಕು.

7. ಯಾವುದೇ ನಿಬಂಧನೆಗೆ ಒಳಪಟ್ಟ ಅಥವಾ ನಿಷೇಧಿಸಿದ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿದ ರೈತರಿಗೆ ಸಹಾಯಧನವನ್ನು ನೀಡಬಾರದು.

8. ಸಸ್ಯ ಸಂರಕ್ಷಣಾ ಔಷಧಿಗಳನ್ನು ಕೃಷಿ/ತೋಟಗಾರಿಕೆ ವಿಶ್ವವಿದ್ಯಾಲಯದ (ಬೆಂಗಳೂರು/ ಧಾರವಾಡ, ಬಾಗಲಕೋಟೆ/ಶಿವಮೊಗ್ಗ/ರಾಯಚೂರು) ವಿಜ್ಞಾನಿಗಳು ಸುಧಾರಿತ ಬೇಸಾಯ ಕ್ರಮಗಳಲ್ಲಿ ಸೂಚಿಸಿರುವಂತೆ ನಿಗದಿತ ಪ್ರಮಾಣದಲ್ಲಿ ಉಪಯೋಗಿಸುವಂತೆ ರೈತರಿಗೆ ಅಧಿಕಾರಿಗಳು ಮಾರ್ಗದರ್ಶನವನ್ನು ನೀಡುವುದು.

9. ತೆಂಗಿನ ಕಪ್ಪು ತಲೆಹುಳುವಿನ ತೀವ್ರ ಹಾವಳಿಯಿದ್ದಲ್ಲಿ ಅಜಾಡಿರಕ್ಟಿನ್ 5% (7.5 ಮಿ.ಲಿ. ಪ್ರತಿ ಗಿಡಕ್ಕೆ) ಎರಡು ಬಾರಿ ಬೇರಿನ ಮೂಲಕ ನೀಡಲು ಸಸ್ಯ ಸಂರಕ್ಷಣೆ ಕ್ರಮಗಳನ್ನು ಕೈಗೊಳ್ಳಲು ಕ್ರಮವಹಿಸುವಂತೆ ರೈತರಿಗೆ ಸಲಹೆ ನೀಡುವುದು.

10. ಪ್ರೋತ್ಸಾಹಧನವನ್ನು ನೀಡುವಾಗ ರೈತ ಫಲಾನುಭವಿಯು ಅನುಬಂಧ-2 ರಲ್ಲಿ ರೈತರ ಅರ್ಜಿ ನಮೂನೆ (ಬೇಡಿಕೆ ಪತ್ರ) ಅನ್ವಯ ಸಲ್ಲಿಸಿದ ಎಲ್ಲಾ ದಾಖಾಲಾತಿಗಳನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಯು ಪರಿಶೀಲಿಸಿ ಅನುಬಂಧ-3 ರನ್ವಯ ರೈತರಿಂದ ಸ್ವಯಂ ಘೋಷಣಾ ಪತ್ರವನ್ನು ಪಡೆದು ಧೃಢೀಕರಿಸುವುದು.

11. ರೈತರಿಗೆ ಸವಲತ್ತುಗಳನ್ನು ನೀಡುವಾಗ ಎಲ್ಲಾ ವರ್ಗದ ರೈತರಿಗೂ ನಿಯಮಾನುಸಾರ ಆದ್ಯತೆ ನೀಡಿ ಸವಲತ್ತುಗಳನ್ನು ನೀಡಬೇಕು.

12. ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಸಹಾಯಧನವನ್ನು ನೀಡಿದಾಗ ಈ ಕಾಂಪೋನೆಂಟ್‌ನ ವೆಚ್ಚವನ್ನು ಉಪ ಶೀರ್ಷಿಕೆ 200 ರಲ್ಲಿ ಭರಿಸಬೇಕು.

13. ಪರಿಶಿಷ್ಟ ಜಾತಿ (SC) ಮತ್ತು ಪರಿಶಿಷ್ಟ ಪಂಗಡದ (ST) ರೈತರಿಗೆ ಸಹಾಯಧನವನ್ನು ಕ್ರಮವಾಗಿ ಉಪ ಶೀರ್ಷಿಕೆ 422 ಮತ್ತು 423 ರಲ್ಲಿ ಭರಿಸಬೇಕು.

**D. <u>ಮೂಲಭೂತ ಸೌಕರ್ಯ:</u>**

1. ಪರೋಪಜೀವಿಗಳ ಉತ್ಪಾದನೆಗೆ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳಿಗೆ ಉಪ ಶೀರ್ಷಿಕೆ (Object code) 200 ರಲ್ಲಿ ವೆಚ್ಚವನ್ನು ಅವಕಾಶ ಮಾಡಿಕೊಂಡು ಪರೋಪಜೀವಿಗಳ ಉತ್ಪಾದನೆ ಕೈಗೊಳ್ಳುವುದು.
2. ಪ್ರಯೋಗಶಾಲೆ ನಿರ್ವಹಣೆಗೆ ಅವಶ್ಯಕವಿರುವ ಕಟ್ಟಡ ರಿಪೇರಿ, ಮೆಶ್ ಅಳವಡಿಕೆ, Electronic ಉಪಕರಣಗಳ ಖರೀದಿ, ದುರಸ್ಥಿ, ಇಂಧನವೆಚ್ಚ, ವಿದ್ಯುಚ್ಛಕ್ತಿ, ವಾಹನ ವೆಚ್ಚ (ಬಾಡಿಗೆ/ಸರ್ಕಾರಿ ವಾಹನ), ಆಡಳಿತಾತ್ಮಕ ವೆಚ್ಚ, ಕೇಂದ್ರಸ್ಥಾನದಲ್ಲಿ ಬೆರಳಚ್ಚುಗಾರರಿಗೆ ವೇತನ ಮತ್ತು ಇತರೆ ವೆಚ್ಚಗಳನ್ನು ಭರಿಸಬಹುದಾಗಿರುತ್ತದೆ. ಈ ಕಾಂಪೋನೆಂಟ್‌ನ ವೆಚ್ಚವನ್ನು ಉಪಶೀರ್ಷಿಕೆ (Object Code) 200 ನಲ್ಲಿ ಭರಿಸುವುದು.

**E. <u>ಸಿಬ್ಬಂದಿ ವೇತನ ಮತ್ತು ವೈದ್ಯಕೀಯ ವೆಚ್ಚದ ಮರುಪಾವತಿ:</u>**

ಸದರಿ ಯೋಜನೆಯಡಿ 17 ಮಂಜೂರಾದ ಹುದ್ದೆಗಳಿದ್ದು, ಭರ್ತಿಯಾಗಿರುವ ಹುದ್ದೆಗಳ ಸಿಬ್ಬಂದಿಗಳ ವೇತನ, ತುಟ್ಟಿ ಭತ್ಯೆ, ಪ್ರವಾಸ ಭತ್ಯೆ, ವೈದ್ಯಕೀಯ ಭತ್ಯೆ, ಇತರೆ ಭತ್ಯೆ ಹಾಗೂ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಸದರಿ ಕಾರ್ಯಕ್ರಮದಡಿ ಮೀಸಲಿರುವ ಉಪಶೀರ್ಷಿಕೆವಾರು ವೆಚ್ಚ ಭರಿಸುವುದು.

## VII. <u>ಫಲಾನುಭವಿಗಳ ಅರ್ಹತೆ, ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಫಲಾನುಭವಿಗಳ ಆಯ್ಕೆ ಮತ್ತು ಸಹಾಯಧನದ ವಿತರಣೆ:</u>

1. ಅರ್ಜಿ ಸಲ್ಲಿಸಿರುವ ತೋಟಗಳಿಗೆ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಸಮೀಕ್ಷೆಯನ್ನು ಕೈಗೊಳ್ಳುವುದು ಹಾಗೂ ತೀವ್ರವಾಗಿ ಬಾಧೆಗೊಳಗಾದ ತೆಂಗಿನ ತೋಟಗಳಿಗೆ ಆದ್ಯತೆ ನೀಡುವುದು.
2. ಪರೋಪಜೀವಿಗಳನ್ನು ನೇರವಾಗಿ ರೈತರಿಗೆ ನೀಡಿದಲ್ಲಿ ನಿಗದಿತ ಅರ್ಜಿ ನಮೂನೆಯಲ್ಲಿ ಸಂಬಂಧಿಸಿದ ರೈತರಿಂದ ಬೇಡಿಕೆ ಪತ್ರವನ್ನು ಪಡೆದು ಸ್ಥಳ ಪರಿಶೀಲಿಸಿ, ಕೀಟಭಾದೆ ಪ್ರಮಾಣಗಳನ್ನು ಅವಲೋಕಿಸಿ

ವಿತರಿಸುವುದು ಹಾಗೂ ಈ ವಿಷಯವನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿರವರಿಗೆ ಮಾಹಿತಿ ನೀಡುವುದು.

3. ಪ್ರಯೋಗಶಾಲೆಯಲ್ಲಿ ಉತ್ಪಾದನೆ ಆಗಿರುವ ಪರೋಪಜೀವಿಗಳನ್ನು ಕಪ್ಪುತಲೆ ಹುಳುವಿನ ಭಾದೆಯಿಂದ ಹಾನಿಯಾಗಿರುವ ಪ್ರತಿ ತೆಂಗಿನ ಮರಕ್ಕೆ 10-15 ಪರೋಪಜೀವಿಗಳನ್ನು ಕನಿಷ್ಠ 4 ಬಾರಿ 15 ದಿನಗಳ ಅಂತರದಲ್ಲಿ ಬಿಡತಕ್ಕದ್ದು.

4. ರೋಗ ಮತ್ತು ಕೀಟ ಭಾದೆಗೆ ತುತ್ತಾದ ತೋಟಗಾರಿಕೆ ಬೆಳೆಗಳ ನಿರ್ವಹಣೆಗಾಗಿ ರೈತ ಫಲಾನುಭವಿಗಳಿಗೆ ಸಹಾಯಧನವನ್ನು ನೀಡುವುದು ಹಾಗೂ ಸಹಾಯಧನವನ್ನು ನೀಡಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸುವುದು.

- ಫಲಾನುಭವಿಗಳು ರೈತನಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
- ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೆಕು.
- ರೈತರು ತೋಟಗಾರಿಕೆ ಬೆಳೆಯನ್ನು ಬೆಳೆದಿರಬೇಕು ಹಾಗೂ ಬೆಳೆದಂತಹ ತೋಟಗಾರಿಕೆ ಬೆಳೆಗಳಿಗೆ ತಗಲುವ ವಿವಿಧ ಕೀಟ ಮತ್ತು ರೋಗಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಯ ಸಹಾಯಧನಕ್ಕಾಗಿ ಅನುಬಂಧ-2 ರನ್ವಯ ನಿಗದಿತ ನಮೂನೆಯಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಫಲಾನುಭವಿ ಭರ್ತಿ ಮಾಡಿ ಸಹಿ ಮಾಡಿದ ಅರ್ಜಿ ಸಲ್ಲಿಸುವುದು.
- ಅರ್ಜಿ ಜೊತೆಗೆ ಪಹಣಿ (RTC), ಆಧಾರ ಕಾರ್ಡ್ ಹಾಗೂ ರೈತರ ಬ್ಯಾಂಕ್ ಖಾತೆಯುಳ್ಳ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿಗಳನ್ನು ಖಡ್ಡಾಯವಾಗಿ ಸಲ್ಲಿಸುವುದು.
- ರೈತ ಫಲಾನುಭವಿಯು ಪರಿಶಿಷ್ಟ ಜಾತಿ (SC) ಮತ್ತು ಪರಿಶಿಷ್ಟ ಪಂಗಡ (ST)ಕ್ಕೆ ಸೇರಿದವರಾದಲ್ಲಿ ಮೇಲೆ ಸೂಚಿಸಿರುವ ದಾಖಲಾತಿಗಳೊಂದಿಗೆ ಜಾತಿ ಪ್ರಮಾಣ ಪತ್ರವನ್ನು ಪಡೆಯುವುದು.
- ಈ ಯೋಜನೆಯಡಿ ಸಹಾಯಧನ ಪಡೆಯಲು ಇಚ್ಚಿಸುವ ರೈತರು ತಾವು ಖರೀದಿಸಿದ ಸಸ್ಯ ಸಂರಕ್ಷಣಾ ಔಷಧಿಗಳ ಬಿಲ್ಲುಗಳಿಗೆ ಕಡ್ಡಾಯವಾಗಿ GST ಸಂಖ್ಯೆ ಇರುವ ಬಿಲ್ಲುಗಳನ್ನು ಅರ್ಜಿಯೊಂದಿಗೆ ಸಲ್ಲಿಸುವುದು.
- ಪ್ರೋತ್ಸಾಹಧನವನ್ನು ನೀಡುವಾಗ ರೈತ ಫಲಾನುಭವಿಯು ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಯು ಪರಿಶೀಲಿಸಿ, ಅನುಬಂಧ-3 ರನ್ವಯ ರೈತರಿಂದ ಸ್ವಯಂ ಘೋಷಣಾ ಪತ್ರವನ್ನು ಪಡೆದು ಧೃಢೀಕರಿಸುವುದು.

- ಎಲ್ಲಾ ವರ್ಗದ ಫಲಾನುಭವಿಗಳು ಅಂದರೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ/ ಸಣ್ಣ ಹಾಗೂ ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.
- ಜಿಲ್ಲೆಯ ತೋ.ಉ.ನಿ. (ಜಿಪಂ) ರವರು ಎಲ್ಲಾ ದಾಖಲೆಗಳನ್ನು ಹಾಗೂ ಹಿ.ಸ.ತೋ.ನಿ (ಜಿಪಂ) ರವರು ನೀಡಿರುವ ವರದಿಯನ್ನು ಪರಿಶೀಲಿಸಿ ಮಾರ್ಗಸೂಚಿಯನ್ವಯ ಕಾರ್ಯಕ್ರಮ ಅನುಷ್ಠಾನಗೊಳಿಸಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಮಂಜೂರಾತಿ ಕ್ರಮಗಳನ್ನು ಕೈಗೊಳ್ಳುವುದು.
- ಸಸ್ಯ ಸಂರಕ್ಷಣಾ ಔಷಧಿಗಳನ್ನು ರೈತರೇ ಖರೀದಿಸಿದ್ದಲ್ಲಿ ಸಹಾಯಧನವನ್ನು ನೇರವಾಗಿ DBT ಮೂಲಕ ರೈತ ಫಲಾನುಭವಿಗೆ ಪಾವತಿಸುವುದು.
- ಇಲಾಖೆವತಿಯಿಂದ **ಅನುಮೋದಿತ Empanel listನ ಸರಬರಾಜುದಾರರು ಪರಿಕರಗಳನ್ನು ಸರಬರಾಜು ಮಾಡಿದ್ದಲ್ಲಿ ಸದರಿಯವರ ಬ್ಯಾಂಕ್ ಖಾತೆಗೆ ಜಮಾ ಮಾಡುವುದು.**
- ಅನುಷ್ಠಾನದ ವಿವರ ಹಾಗೂ ಫಲಾನುಭವಿಗಳ ಪಟ್ಟಿಯ ವರದಿಯನ್ನುಸತೋಅ (RSK) ಹಾಗೂ ಹಿಸತೋನಿ ರವರ ಧೃಡೀಕರಣದೊಂದಿಗೆ ತೋಟಗಾರಿಕೆ ಉಪನಿರ್ದೇಶಕರು (ಜಿಪಂ) ರವರಿಗೆ ಸಲ್ಲಿಸುವುದು.

## VIII. ತಾಂತ್ರಿಕ ಪರಿಶೀಲನಾ ಕ್ರಮಗಳು

1. ಪರೋಪಜೀವಿಗಳ ಉತ್ಪಾದನೆಗೆ ಸಂಬಂಧಿಸಿದಂತೆ ಪ್ರತಿ ಮಾಹೆಯಲ್ಲಿ ಪ್ರಯೋಗಶಾಲೆಯಲ್ಲಿ ಗುಣಮಟ್ಟದ ಪರೋಪಜೀವಿಗಳನ್ನು ಉತ್ಪಾದಿಸುವ ಬಗ್ಗೆ ತಾಲ್ಲೂಕು ಅಧಿಕಾರಿಗಳು/ತೋ.ಉ.ನಿ (ಜಿಪಂ) ರವರು ಪರಿಶೀಲಿಸುವುದು.
2. ಉತ್ಪಾದಿಸಿದ ಪರೋಪಜೀವಿಗಳನ್ನು ಕಪ್ಪುತಲೆ ಹುಳುವಿಗೆ ಹಾನಿಯಾಗಿರುವ ತೆಂಗಿನ ತೋಟಗಳಿಗೆ ಸರಿಯಾದ ಹಂತ/ಪ್ರಮಾಣದಲ್ಲಿ ಬಿಡುಗಡೆ ಮತ್ತು ಕೀಟ ನಿಯಂತ್ರಣವಾಗಿದೆಯೇ ಎಂದು ಪ್ರತಿ ಹಂತದಲ್ಲಿಯೂ ಪರಿಶೀಲಿಸುವುದು.

## IX. ಅನುಷ್ಠಾನ ವೇಳಾಪಟ್ಟಿ:

ಯೋಜನೆಗೆ ನಿಗದಿಪಡಿಸಿದ ಅನುಷ್ಠಾನ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನಗೊಳಿಸತಕ್ಕದ್ದು.

## X. ಅನುಬಂಧಗಳು:

1. ಪರೋಪಜೀವಿಗಳ ಪ್ರಯೋಗಶಾಲೆಗಳಲ್ಲಿ ಏಕರೂಪತೆಯನ್ನು ಪಾಲಿಸಲು ಉತ್ಪಾದನಾ ಬಿಡುಗಡೆ ಇತ್ಯಾದಿ ವಿವರಗಳನ್ನು ಸಂಬಂಧಪಟ್ಟ ವಹಿಗಳಲ್ಲಿ ದಾಖಲಿಸಬೇಕಾದ ವಿವರಗಳ ನಮೂನೆ (ಅನುಬಂಧ-1)
2. ಅರ್ಜಿ ನಮೂನೆ (ಅನುಬಂಧ-2)
3. ರೈತ ಫಲಾನುಭವಿಯ ಸ್ವಯಂ ಘೋಷಣೆ ನಮೂನೆ ಮತ್ತು ಅಧಿಕಾರಿಗಳ ತಾಕು ಪರಿಶೀಲನಾ ದೃಡೀಕರಣ ಪತ್ರ (ಅನುಬಂಧ-3)

## XI. ಆರ್ಥಿಕ ಪ್ರತ್ಯಯೋಜನೆ (Delegation of Power):

ಈ ಯೋಜನೆ (ಲೆಕ್ಕ ಶೀರ್ಷಿಕೆ:2401-00-119-5-02) ಯಡಿ ಮಾನವ ಸಂಪನ್ಮೂಲ/ಪರಿಕರ ಖರೀದಿಗಾಗಿ ಬಿಡುಗಡೆಯಾದ ಅನುದಾನವನ್ನು ನಿಯಾಮಾನುಸಾರ ಸಾದಿಲ್ವಾರು ಬಿಲ್ಲುಗಳನ್ನು ತಯಾರಿಸಿ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ-3ಟಿಎಫ್‌ಪಿ 2018 ದಿನಾಂಕ: 14.05.2018 ರ ಕ್ರಮ ಸಂಖ್ಯೆ.8 ರನ್ವಯ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು.

ಸಸ್ಯ ಸಂರಕ್ಷಣೆ ಔಷಧಿ ಖರೀದಿಗಾಗಿ ಸಹಾಯಧನ ನೀಡಲು ಬಿಡುಗಡೆಯಾದ ಅನುದಾನವನ್ನು ನಿಯಾಮನುಸಾರ ಸಾದಿಲ್ವಾರು ಬಿಲ್ಲು ಮತ್ತು ಮಂಜೂರಾತಿಗಳೊಂದಿಗೆ DBT ಮೂಲಕ ಫಲಾನುಭವಿಗಳಿಗೆ ಸಹಾಯಧನವನ್ನು ನೀಡುವುದು. ಮಂಜೂರಾತಿ ನೀಡಲು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ-3ಟಿಎಫ್‌ಪಿ 2018 ದಿನಾಂಕ:14.05.2018 ಕ್ರಮ ಸಂಖ್ಯೆ.12 ರನ್ವಯ ಪ್ರದತ್ತವಾದ ಆರ್ಥಿಕ ಪ್ರತ್ಯಾಧಿಕಾರವನ್ನು ಅನುಸರಿಸುವುದು ಹಾಗೂ ಮಾರ್ಗಸೂಚಿಯಂತೆ ಮಂಜೂರು ಮಾಡಲು ತೋ.ಉ.ನಿ.(ಜಿಪಂ) ರವರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

## XII. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು:

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇ-ಮೇಲ್ ಮುಖಾಂತರ ತಿಂಗಳ 2ನೇ ದಿನಾಂಕದ ಒಳಗಾಗಿ ಹಾಗೂ ಪ್ರಗತಿ ವರದಿಯ ಹಾರ್ಡ್ ಕಾಪಿಯನ್ನು ತಪ್ಪದೇ ತೋಟಗಾರಿಕೆ ಜಂಟಿ ನಿರ್ದೇಶಕರು (ತೋಟದ ಬೆಳೆಗಳು ಮತ್ತು ಸಸ್ಯ ಸಂರಕ್ಷಣೆ) ರವರಿಗೆ ಸಲ್ಲಿಸುವುದು.
2. ತೆಂಗಿನ ತೋಟದಲ್ಲಿ ಕಪ್ಪು ತಲೆ ಹುಳುವಿಗೆ ತುತ್ತಾದ ಮರಗಳನ್ನು ನಿಯಂತ್ರಿಸಿದ ಬಣ್ಣದ ಛಾಯಾಚಿತ್ರಗಳೊಂದಿಗೆ ಯಶೋಗಾಥೆಗಳನ್ನು ತೋಟಗಾರಿಕೆ ಜಂಟಿ ನಿರ್ದೇಶಕರು (ತೋಟದ ಬೆಳೆಗಳು ಮತ್ತು ಸಸ್ಯ ಸಂರಕ್ಷಣೆ) ರವರಿಗೆ ಸಲ್ಲಿಸುವುದು.

**ನಿರ್ದೇಶಕರು**

## ಅನುಬಂಧ-3

**ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆಯಡಿ ರೈತ ಫಲಾನುಭವಿಯ ಸ್ವಯಂ ಘೋಷಣೆ ನಮೂನೆ**

ಶ್ರೀ/ಶ್ರೀಮತಿ ______________________ ಬಿನ್/ಕೋ ______________________ ಗ್ರಾಮ __________ ಹೋಬಳಿ _______________ತಾಲ್ಲೂಕು ______________ ಜಿಲ್ಲೆ __________ ಆದ ನಾನು __________ ತೋಟಗಾರಿಕೆ ಬೆಳೆಯನ್ನು __________ ವಿಸ್ತೀರ್ಣದಲ್ಲಿ __________ ಸರ್ವೇ ನಂಬರನಲ್ಲಿ ಬೆಳೆದಿದ್ದು, ಸದರಿ ಬೆಳೆಗೆ ತಗಲಿರುವ__________ ಕೀಟ/ರೋಗ ನಿಯಂತ್ರಣಕ್ಕೆ __________ ಸಸ್ಯ ಸಂರಕ್ಷಣೆ ಔಷಧಿಯನ್ನು ಖರೀದಿಸಿರುತ್ತೇನೆ. ಸದರಿ ಸಸ್ಯ ಸಂರಕ್ಷಣೆ ಔಷಧಿ ಖರೀದಿಗೆ ರೂ.__________/- ಮೊತ್ತದ ವೆಚ್ಚವನ್ನು ಭರಿಸಿರುತ್ತೇನೆ. ಇದಕ್ಕೆ ಸಂಬಂಧಿಸಿದ ಬಿಲ್ಲು/ರಸೀದಿಗಳನ್ನು ಲಗತ್ತಿಸಿರುತ್ತೇನೆ. ಸದರಿ ಸಹಾಯಧನವನ್ನು ಇಲಾಖೆ ನೀಡಿರುವ ಉದ್ದೇಶಕ್ಕೆ ಬಳಸಿಕೊಳ್ಳುತ್ತೇನೆ ಎಂದು ಈ ಮೂಲಕ ಘೋಷಿಸುತ್ತೇನೆ.

**ಫಲಾನುಭವಿಯ ಸಹಿ**

**(ಹೆಸರು ಮತ್ತು ವಿಳಾಸ)**

**ದಿನಾಂಕ:**

**ಸ್ಥಳ:**

**ಪರಿಶೀಲನಾ ಅಧಿಕಾರಿ ಧೃಢೀಕರಣ**

ಶ್ರೀ/ಶ್ರೀಮತಿ ----------------------------------------ಬಿನ್/ಕೋ-----------------------ಗ್ರಾಮ------------ ಹೋಬಳಿ-------------------ತಾಲ್ಲೂಕು--------------------------ಜಿಲ್ಲೆ-----------------------ರವರು----------- ---ತೋಟಗಾರಿಕೆ ಬೆಳೆಯನ್ನು----------ವಿಸ್ತೀರ್ಣದಲ್ಲಿ-----------ಸರ್ವೇ ನಂ.ನಲ್ಲಿ ಬೆಳೆದಿದ್ದು, ಸದರಿ ಬೆಳೆಗೆ ತಗಲಿರುವ---------------ಕೀಟ/ರೋಗ ನಿಯಂತ್ರಣಕ್ಕೆ-------------------------ಸಸ್ಯ ಸಂರಕ್ಷಣೆ ಔಷಧಿಯನ್ನು ಖರೀದಿಸಿರುತ್ತಾರೆ. ಸದರಿ ಸಸ್ಯ ಸಂರಕ್ಷಣೆ ಔಷಧಿಗೆ ಶೇ.75/ಶೇ.90 ರಂತೆ---------------------ಸಹಾಯಧನವನ್ನು ನೀಡಲು ಈ ಮೂಲಕ ಶಿಫಾರಸ್ಸು ಮಾಡುತ್ತೇನೆ.

**ಸಹಾಯಕ ತೋಟಗಾರಿಕೆ ಅಧಿಕಾರಿ**

**----------------ಹೋಬಳಿ**

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿಪಂ),**

**--------------ತಾಲ್ಲೂಕು**

# ಅನುಬಂಧ-2

**ರೈತರ ಅರ್ಜಿ ನಮೂನೆ (ಬೇಡಿಕೆ ಪತ್ರ)**

**ಇಂದ,**

______________________________

______________________________

______________________________

**ಗೆ,**

______________________________

______________________________

______________________________

**ಮಾನ್ಯರೇ,**

ನಾನು ಶ್ರೀ/ಶ್ರೀಮತಿ ______________________ ಗ್ರಾಮ ______________________ದಲ್ಲಿನ ______________________ ಸರ್ವೇ ನಂಬರ್‌ನಲ್ಲಿ____________ ತೋಟಗಾರಿಕೆ ಬೆಳೆಯನ್ನು ಬೆಳೆದಿದ್ದು, ರೋಗ/ಕೀಟಗಳ ಹತೋಟಿಗಾಗಿ ______________________ ಸಸ್ಯ ಸಂರಕ್ಷಣೆ ಔಷಧಿಯನ್ನು ಖರೀದಿ ಮಾಡಲು ತೋಟಗಾರಿಕೆ ಇಲಾಖೆಯಿಂದ ರೈತರಿಗೆ ನೀಡುವ ಪ್ರೋತ್ಸಾಹಧನವನ್ನು/ತೆಂಗು ಬೆಳೆಗೆ ಮಾಡಲು ತಗಲುವ ಕಪ್ಪು ತಲೆ ಹುಳುವಿನ ಭಾದೆಯ ನಿಯಂತ್ರಣಕ್ಕಾಗಿ ವಿತರಿಸುವ ಪರೋಪಜೀವಿಗಳನ್ನು ನೀಡಲು ಕೋರಿ ಅರ್ಜಿ ಸಲ್ಲಿಸಿರುತ್ತೇನೆ.

**ತಮ್ಮ ವಿಶ್ವಾಸಿ**

**ರೈತ ಫಲಾನುಭವಿಯ ಸಹಿ**

ಫಲಾನುಭವಿಯ ಬ್ಯಾಂಕ್ ಖಾತೆ ವಿವರ:

1.ಬ್ಯಾಂಕ್ ಹೆಸರು ಮತ್ತು ವಿಳಾಸ:

2.ಬ್ಯಾಂಕ್ ಖಾತೆ ನಂ:

ಸ್ಥಳ:

ದಿನಾಂಕ:

## ಅನುಬಂಧ-1

**S-11 ಯೋಜನೆ 2021-22ನೇ ಸಾಲಿನ________________ಮಾಹೆಯ ಪ್ರಗತಿಯ ಗೋನಿಯೋಜಸ್ ಪರೋಪಜೀವಿಗಳ ಉತ್ಪಾದನೆಯ ವಹಿಯಲ್ಲಿ ದಾಖಲಿಸಿದ ವಿವರಗಳು**

| ಕ್ರ.ಸಂ | ನಳಿಕೆಗಳಿಗೆ ಅಕ್ಕಿ ಹುಳು ತುಂಬಿದ ದಿನಾಂಕ | ಅಕ್ಕಿ ಹುಳುವಿನೊಡನೆ ಪರೋಪಜೀವಿಗಳನ್ನು ಸೇರಿಸಿದ ಟ್ಯೂಬ್‌ಗಳ ಸಂಖ್ಯೆ | ಆಸರೆ ಹುಳುಗಳು ಸತ್ತಿರುವ ಟ್ಯೂಬ್ ಗಳ ಸಂಖ್ಯೆ | ಆಸರೆ ಹುಳುಗಳ ಮೇಲೆ ಪರೋಪಜೀವಿಗಳು ವೃದ್ಧಿಯಾದ ಟ್ಯೂಬ್‌ಗಳ ಸಂಖ್ಯೆ | ವೃದ್ಧಿಯಾದ ಮೊಟ್ಟೆಗಳ ಸಂಖ್ಯೆ | ಸತ್ತಿರುವ ಮೊಟ್ಟೆಗಳ ಸಂಖ್ಯೆ | ವೃದ್ಧಿ ಯಾದ ಪರೋಪ ಜೀವಿಗಳ ಸಂಖ್ಯೆ | ಸತ್ತ ಪರೋಪ ಜೀವಿಗಳ ಸಂಖ್ಯೆ | ಬಿಡುಗಡೆ ಲಭ್ಯವಾದ ದಿನಾಂಕ: | ವಯಸ್ಕ ಪರೋಪ ಜೀವಿಗಳ ಸಂಖ್ಯೆ | ಪ್ರಯೋಗ ಶಾಲೆಗೆ ಮರು ಉತ್ಪಾದನೆಗೆ ಉಪಯೋಗಿಸಿದ ಪರೋಪ ಜೀವಿಗಳ ಸಂಖ್ಯೆ | ಬಿಡುಗಡೆಗೆ ಲಭ್ಯವಿರುವ ಪರೋಪ ಜೀವಿಗಳ ಸಂಖ್ಯೆ |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | | | | | | | | | | | | |

**2021-22 ನೇ ಸಾಲಿನ _____________ ಮಾಹೆಯ ಉತ್ಪಾದನೆಯ ಗೋನಿಯೋಜಸ್ ಪರೋಪಜೀವಿಗಳ ಬಿಡುಗಡೆ ವಹಿಯಲ್ಲಿ ದಾಖಲಿಸಿದ ವಿವರಗಳು:**

| ಕ್ರ.ಸಂ | ಬಿಡುಗಡೆ ದಿನಾಂಕ | ರೈತರ ಹೆಸರು ಮತ್ತು ವಿಳಾಸ ದೂರವಾಣಿ ಸಂಖ್ಯೆ: | ಸರ್ವೆ ನಂ | ಬಿಡುಗಡೆ ಮಾಡಿದ ಮರಗಳ ಸಂಖ್ಯೆ | ಗೋನಿಯೋಜಸ್ ಪರೋಪ ಜೀವಿಗಳ ಬಿಡುಗಡೆ ಸಂಖ್ಯೆ | ರೈತರ ಸಹಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |
| | | | | | | |